# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 758
ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
ಉತ್ತರಿಸುವ ದಿನಾಂಕ : 15-12-2020
ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಡಿಪಿಎಆರ್, ಡಿಪಿಎಲ್ ಮತ್ತು ಹಣಕಾಸು ಇಲಾಖೆಗಳು ಅಭಿಪ್ರಾಯ ಸಲ್ಲಿಸಿದ್ದರೂ ಸಹ ಅಂತಿಮ ತಿದ್ದುಪಡಿ ನಿಯಮ ಪ್ರಕಟಿಸದಿರಲು ಕಾರಣವೇನು; ಯಾವ ಕಾರಣದಿಂದ ವಿಳಂಬವಾಗುತ್ತಿದೆ; (ಪೂರ್ಣ ವಿವರಗಳನ್ನು ನೀಡುವುದು) | ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗೆ ಡಿಪಿಎಆರ್, ಡಿಪಿಎ ಮತ್ತು ಹಣಕಾಸು ಇಲಾಖೆಗಳ ಅಭಿಪ್ರಾಯ ಪಡೆಯಲಾಗಿರುತ್ತದೆ. ಈ ತಿದ್ದುಪಡಿ ವಿಷಯದ ಬಗ್ಗೆ ಇಲಾಖೆಯ ವೃಂದ ಮತ್ತು ನೇಮಕಾತಿ ಉಪಸಮಿತಿಯ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಪರಿಷ್ಕೃತ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಶೋಧಿಸಲು ಪ್ರಸ್ತಾವನೆಯನ್ನು ಸಂಸದೀಯ ವ್ಯವಹಾರಗಳ ಇಲಾಖೆಗೆ ಸಲ್ಲಿಸಲಾಗಿದೆ. ಸಂಸದೀಯ ವ್ಯವಹಾರಗಳ ಇಲಾಖೆಯಿಂದ ಕರಡು ನಿಯಮಗಳನ್ನು ಪರಿಶೋಧಿಸಿದ ನಂತರ ವೃಂದ ಮತ್ತು ನೇಮಕಾತಿ ಸಮಿತಿಯ ಮುಂದೆ ಮಂಡಿಸಿ ಸಮಿತಿಯ ಒಪ್ಪಿಗೆಯ ನಂತರ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಕರಡು ನಿಯಮಗಳನ್ನು ಪ್ರಕಟಿಸಲಾಗುವುದು. ನಿಗದಿತ ಕಾಲಾವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆ / ಸಲಹೆಗಳನ್ನು ಪರಿಶೀಲಿಸಿದ ನಂತರ ಅಂತಿಮ ನಿಯಮಗಳನ್ನು ಹೊರಡಿಸಲು ಕ್ರಮವಹಿಸಲಾಗುವುದು. |
| ಆ) | ಜೇಷ್ಠತೆಯಲ್ಲಿ ಹಿರಿಯ ಸಿಡಿಓ ಗಳನ್ನು ಕೈಬಿಟ್ಟು ಕಿರಿಯವರಾಗಿರುವವರಿಗೆ ನಿಬಂಧಕರ ಹುದ್ದೆಗೆ ಮುಂಬಡ್ತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಈ ಬಗ್ಗೆ ಪರಿಶೀಲಿಸಿ ತೆಗೆದುಕೊಂಡ ಕ್ರಮಗಳೇನು; (ಪೂರ್ಣ ವಿವರಗಳನ್ನು ನೀಡುವುದು) | ಜೇಷ್ಠತೆಯಲ್ಲಿ ಹಿರಿಯ ಸಿಡಿಓಗಳನ್ನು ಕೈಬಿಟ್ಟು ಕಿರಿಯವರಾಗಿರುವವರಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಗೆ ಸ್ಥಾನವನ್ನು ಮುಂಬಡ್ತಿ ನೀಡಿರುವುದಿಲ್ಲ.<br><br>ಆದರೆ, ಆಡಳಿತಾತ್ಮಕ ಹಿತದೃಷ್ಟಿಯಿಂದ ಸಹಕಾರ ಅಭಿವೃದ್ಧಿ ಅಧಿಕಾರಿಗಳನ್ನು ಕೆ.ಸಿ.ಎಸ್.ಆರ್ ನಿಯಮ-32 ರಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ. ಇದು ಮುಂಬಡ್ತಿಯಾಗಿರುವುದಿಲ್ಲ ಬದಲಿಗೆ ತಾತ್ಕಾಲಿಕ ವ್ಯವಸ್ಥೆಯಾಗಿರುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿಯನ್ನು ಪೂರ್ಣಗೊಳಿಸಲಾಗುವುದು; | ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶದನ್ವಯ ಸಹಕಾರ ಸಂಘಗಳ ನಿಬಂಧಕರಿಂದ ಸ್ವೀಕೃತವಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯ ಪ್ರಸ್ತಾವನೆಯನ್ನು **ಉಪ ಪ್ರಶ್ನೆ "ಅ"** ರಲ್ಲಿ ವಿವರಿಸಿರುವಂತೆ ಕ್ರಮವಹಿಸಲಾಗುವುದು. |
| ಈ) | ದಿನಾಂಕ:17-08-2017 ರ ಕೆ.ಎ.ಟಿ, ಬೆಂಗಳೂರು ಆದೇಶವನ್ನು ಅನುಷ್ಠಾನಗೊಳಿಸಲು ತಹಲ್‌ವರೆವಿಗೆ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು) | |

ಸಂಖ್ಯೆ:ಸಿಓ 314 ಇಸಿಎ 2020

**(ಎಸ್.ಟಿ.ಸೋಮಶೇಖರ್)**
ಸಹಕಾರ ಸಚಿವರು